2) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಇಂತಿಷ್ಟೇ ಸಮಯದಲ್ಲಿ ಪೀಠವನ್ನು ಸ್ಥಾಪಿಸಲಾಗುವುದೆಂದು ತಿಳಿಸಲು ಸಾಧ್ಯವಿಲ್ಲ.

ಬೆಂಗಳೂರು ಕೇಂದ್ರ ಕಾರಾಗೃಹದ ಬಗ್ಗೆ

246 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜೇರಾದ್) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಖೈದಿಗಳಿಗಾಗಿ ಧಾನ್ಯ ಶಿಬಿರವನ್ನು ಏರ್ಪಡಿಸಿರುವುದು ನಿಜವೇ?

ಇ) ಇದೇ ಮಾದರಿಯ ಶಿಬಿರಗಳನ್ನು ಜಿಲ್ಲಾ ಕಾರಾಗೃಹಗಳಲ್ಲಿಯೂ ಸಹ ಏರ್ಪಡಿಸಲಾಗುವುದೇ

ಶ್ರೀ ಎನ್. ಮೀರಾಜುದ್ದೀನ್ ಪಾಟೀಲ್ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಹೌದು.

ಆ) 1) ಖೈದಿಗಳ ಮನಸ್ಸನ್ನು ಪರಿವರ್ತಿಸಿ ಅವರು ಸಂತೋಷದ ಹಾಗೂ ಸಹಬಾಳ್ವೆಯ ಜೀವನ ನಡೆಸುವಂತೆ ಪ್ರೋತ್ಸಾಹಿಸುವುದು.

2) ಈ ಶಿಬಿರ ನಡೆಸಲು ಹಣ ಖರ್ಚಾಗುವುದಿಲ್ಲ.

ಇ) ಪರಿಶೀಲನೆಯಲ್ಲಿದೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ವಿತ್ತೀಯ ಕಾರ್ಯಕಲಾಪ ಮಾನ್ಯ ವಾಟಾಳ್ ನಾಗರಾಜ್‌ರವರು ಚರ್ಚೆಯನ್ನು ಆರಂಭ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಪದೇ ಪದೇ ಇಲ್ಲಿ ಎಲ್ಲರಿಗೂ ಹೇಳಬೇಕು ಎಂದು ಹೇಳುತ್ತಲೇ ಬಂದಿದ್ದೇವೆ. ಈಗ ಎಲ್ಲರೂ 9-30ಕ್ಕೆ ಬರಬೇಕು ಎಂದು ಸಮಯವನ್ನು ನಿಗದಿ ಮಾಡಿ ಆ ಪ್ರಕಾರ ಬರುತ್ತಿದ್ದೇವೆ.

ಆ ಕಡೆ ಅರ್ಥ ಸಚಿವರು ಬರಬೇಕು. ಕನಿಷ್ಟ ಸೆಕ್ರೆಟರಿಗಳಾದರೂ ಬರಬೇಕು, ಫೈನಾನ್ಸ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ ಅಡಿಷನಲ್ ಸೆಕ್ರೆಟರಿ, ಏಕೆಂದರೆ ಸದಸ್ಯರು ಅನೇಕ ಸಲಹೆಗಳನ್ನು ಕೊಡುತ್ತಾರೆ. ನನಗೆ ಏನು ಸೆಕ್ರೆಟರಿಸ್ ಗೊತ್ತಿಲ್ಲವೆ, ನಾನು 25 ವರ್ಷಗಳಿಂದ ಇದ್ದೇನೆ. ಇವತ್ತು ಚೀಫ್ ಸೆಕ್ರೆಟರಿ ಆಗಿರುವವರನ್ನು ಅವರು ಪ್ರೊಬೆಷನರಿಯಿದ್ದಾಗಿನಿಂದಲೇ ನಾನು ನೋಡಿದ್ದೇನೆ. ಅದಕ್ಕೆ ನೀವು ಏನಾದರೂ ಒಂದು ಕಟ್ಟುನಿಟ್ಟಾದಂತಹ ಆದೇಶ ನೀಡಬೇಕು. ಇಲ್ಲವಾದರೆ ಏನಾಗುತ್ತದೆ, ಈ ಸದನವನ್ನು ಎಲ್ಲರೂ ಲಘುವಾಗಿ ತೆಗೆದುಕೊಳ್ಳುತ್ತಾರೆ. ನಾವಾದರೂ ಸಹ ಇಷ್ಟು ಬೇಗ ಏಕೆ ಬರಬೇಕು? ನಾವು ಸಹ ಸಾವಕಾಶವಾಗಿ ಬರುತ್ತೇವೆ. ಯಾರೇ ಮಾತನಾಡಲಿ ನಿಮ್ಮನಮ್ಮ ಸಮಯಕ್ಕೆ

ಮಾತನಾಡುವುದಿದ್ದರೆ ಇಲ್ಲಿ ನಿಮಗೆ ಬರೆದುಕೊಟ್ಟು ಹೋಗಿಬಿಡುತ್ತೇನೆ. ಇಲ್ಲಿಗೆ ಟೇಪ್‌ರೆಕಾರ್ಡರ್ ಮಾಡಿ ತಂದುಕೊಟ್ಟರೆ ಇಲ್ಲಿ ರೆಕಾರ್ಡ್ ಆಗುತ್ತದೆ, ಪುಸ್ತಕವನ್ನು ನೀವು ಪ್ರಿಂಟ್ ಮಾಡಿ ಅವರವರು ಬಂದು ಓದಿಕೊಂಡು ಹೋಗುತ್ತಾರೆ. ನಾವು ಇಲ್ಲಿ ಹೇಳುವ ಅರ್ಥ ಏನೆಂದರೆ ನಾವು ಹೈಲೇಟ್ ಮಾಡುವುದು ಅದಕ್ಕೆ ಅವರು ಕನಿಷ್ಟ ಪಕ್ಷ ಸಾಧ್ಯವಾದರೆ ರೆಸ್ಪಾಂಡ್ ಮಾಡಿ ನಾಳೆ ಟ್ಯಾಕ್ಸೇಷನ್ ಕನ್ಸಿಷನ್ ಕೊಡುವುದಿದ್ದರೆ, ಅನೌನ್ಸ್ ಮಾಡುವುದು, ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳತಕ್ಕಂಥಾದ್ದು ಇದೆಲ್ಲಾ ಇರುತ್ತದೆ. ಇಲ್ಲಿ ಒಬ್ಬರು ಇಲ್ಲ ಎಂದರೆ ಬಹಳ ಕಷ್ಟವಾಗುತ್ತದೆ. ನಾವು ಎಷ್ಟು ಸಲ ಹೇಳಿಕೆವಾಳ್ಯೋದು. ಇದರಿಂದ ಇದು ಏನಾಗುತ್ತದೆ, ನಮ್ಮ ಗೌರವವನ್ನು ನಾವು ಕಳೆದುಕೊಂಡ ಹಾಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಈ ಸದನದಲ್ಲಿ ಅನೇಕ ಬಾರಿ ನಾವುಗಳು ಒತ್ತಾಯ ಮಾಡಿದ್ದು ಆಯಿತು, ತಮಗೂ ಗಮನಕ್ಕೆ ತಂದಿದ್ದೂ ಆಯಿತು. ಇದು ಒಂದು ರೀತಿ ಚಾಳಿ ಆಗಿಬಿಟ್ಟಿದೆ. ಅಯ್ಯೋ ಅಸೆಂಬ್ಲಿ ಅಲ್ಲವಾ, ಹೋದರಾಯಿತು ಎನ್ನುವ ಹಾಗೆ ನಿಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆ. ವಿಧಾನ ಪರಿಷತ್ತಿನ ವಿಷಯದಲ್ಲಿ ಪತ್ರಿಕೆಯಲ್ಲಿ ಬಂದಿದೆ. ಅಲ್ಲಿಯೂ ಸಹ ಅಧಿಕಾರಿಗಳು ಹೋಗಿಲ್ಲವೆಂದು ಸಭಾಪತಿಯವರು ಅಧಿಕಾರಿಗಳ ಮೇಲೆ ತೀವ್ರವಾದಂತಹ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಇಲ್ಲಿ ತಾವು ಸಹ ತೀಕ್ಷ್ಣವಾಗಿ ಕೊಡಬಾರದು ಎನ್ನುವ ಭಾವನೆಯಿಂದ ಇದ್ದೀರಿ ಎಂದು ನನಗೆ ಅನಿಸುತ್ತದೆ. ಆದರೆ ಇದು ಹೀಗೆ ಮುಂದುವರೆದರೆ ಇದು ನಿಜವಾಗಿಯೂ ಈ ಸದನಕ್ಕೆ ಅಗೌರವ ತೋರಿಸಿದ ಹಾಗಾಗುತ್ತದೆ. ಈ ಸದನದಲ್ಲಿ ಆಯವ್ಯಯ ಮಂಡನೆ ಆಗುತ್ತಿರುವಾಗ ಅಧಿಕಾರಿಗಳು ಪ್ರಮುಖವಾಗಿ ಇರುವುದಿಲ್ಲವೆಂದರೆ ಒಳ್ಳೆಯದಲ್ಲ. ತಾವು ಏನು ಕಾಲವನ್ನು ನಿಗದಿ ಮಾಡಿದ್ದೀರಿ ಆ ಕಾಲಕ್ಕೆ ನಾವೆಲ್ಲಾ ಬರುತ್ತೇವೆ. ತಾವು ರಾತ್ರಿ 9 ಗಂಟೆಯವರೆಗೂ ನಡೆಸಿದರೆ ನಾವು ಕುಳಿತುಕೊಳ್ಳುತ್ತಿದ್ದೆವು. ಈ ಸದನ ಮುಗಿದ ಮೇಲೆ ನಾವು ಹೋದೆವು. ನಾವು ಎಷ್ಟೊಂದು ಶ್ರದ್ಧೆಯಿಂದ ಇಲ್ಲಿ ಬಂದು ಕುಳಿತುಕೊಂಡು ಕಾರ್ಯಕಲಾಪ ಮಾಡುತ್ತಿದ್ದೇವೆ. ಇಂಥ ಶಾಸನ ಸಭಾ ಕಾರ್ಯಕಲಾಪಕ್ಕೆ ಒಬ್ಬರೂ ಬರುವುದಿಲ್ಲ ಎಂದರೆ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಮತ್ತು ಇದು ಈ ಸದನದ ಹಕ್ಕಿಗೂ ಚ್ಯುತಿಯಾಗುತ್ತದೆ ಎನ್ನುವಂತಹ ಭಾವನೆಯನ್ನು ತಮ್ಮಮುಂದೆ ಹೇಳಬೇಕಾಗುತ್ತದೆ. ಮತ್ತು ಅವರ ವಿರುದ್ಧ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸತಕ್ಕಂಥ ಕಾಲ ಸನ್ನಿಹಿತವಾಗುತ್ತಿದೆನ್ನುವ ಮಾತನ್ನು ಹೇಳುತ್ತಿದ್ದೇನೆ. ಅದರ ಜೊತೆಗೆ ಸಂಸದೀಯ ಸಚಿವರು ಬರಬೇಕು, ಅದು ಅತೀ ಮುಖ್ಯ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಾವುಗಳು ಹೊಸ ಶಾಸಕರು, ಇದರಿಂದ ನಮಗೆ ಏನು ಕಾಣಿಸುತ್ತದೆ ಎಂದರೆ ಅವರ ಅಭ್ಯಾಸವನ್ನು ನಾವು ಕೂಡ ರೂಢಿಸಿಕೊಂಡು ಇನ್ನು ಮುಂದೆ ಸದನಕ್ಕೆ ಬರದೇ ಎಲ್ಲಾದರೂ ಕುಳಿತುಕೊಂಡು ಹೋಗಬಹುದು ಎನ್ನುವ ಭಾವನೆ ಬರುತ್ತದೆ. ಯಾವ ಅಧಿಕಾರಿಗಳು ಅಥವಾ ಮಂತ್ರಿಗಳು ಸದನಕ್ಕೆ ಬರುವಂತಹ ಭಾವನೆ ಬರುತ್ತದೆ. ಯಾವ ಅಧಿಕಾರಿಗಳು ಅಥವಾ ಮಂತ್ರಿಗಳು ಸದನಕ್ಕೆ ಬರುವಂತಹ ಪ್ರಯತ್ನವನ್ನು ಮಾಡುತ್ತಿಲ್ಲ, ಇದರಿಂದಾಗಿ ಈ ಒಂದು ಶಾಸನಸಭೆಯ ಗೌರವ ಯಾವಮಟ್ಟಕ್ಕೆ ಹೋಗಿ ಮುಟ್ಟಿದೆ ಎಂದು ಹೇಳುವುದನ್ನು ತಾವು ಅತ್ಯಂತ

ಗಂಭೀರವಾಗಿ ಪರಿಗಣನೆ ಮಾಡಬೇಕು. ಮತ್ತು ಹೊಸ ಶಾಸಕರಿಗೆ ಮಾದರಿಯಾಗುವ ರೀತಿಯಲ್ಲಿ ಅವರು ನಡೆದುಕೊಳ್ಳಬೇಕು ಎಂದು ಅವರಿಗೆ ತಿಳಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ನೀವು ನಿನ್ನೆ ಒಂದು ತರಹ ಡ್ರೆಸ್- ಹಾಕಿದ್ದೀರಿ, ಇವತ್ತು ಒಂದು ತರಹ ಹಾಕಿದ್ದೀರಿ, ನಿಮ್ಮನ್ನು ಗುರುತು ಹಿಡಿಯುವುದು ಹೇಗೆ?

ಒಬ್ಬ ಮಾನ್ಯ ಸದಸ್ಯರು : ನಿನ್ನೆ ತುಂಬಾ ಸೆಕೆ ಇದ್ದ ಕಾರಣ ಸ್ವಲ್ಪ ಬೆವರು ಬಂದಿತು ಇದರಿಂದ ಕೊಳೆ ಜಾಸ್ತಿಯಾಯಿತು, ಅದಕ್ಕೆ ಹೊಸದಾಗಿ ಹಾಕಿಕೊಂಡು ಬಂದಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ವಿರೋಧ ಪಕ್ಷದವರ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಹಮತ ಇದೆ. ಬಹುಶಃ ಬಸ್ ಮಾಲೀಕರು ಬಂದಿದ್ದಾರೆ ಅವರ ಜೊತೆ ಏನೋ ಸಭೆ ನಡೆಸುತ್ತಿರ ಬಹುದು ಎಂದು ಕಾಣುತ್ತದೆ. ಇಲ್ಲಿ ಮಾನ್ಯ ಸದಸ್ಯರು ಏನು ಹೇಳುತ್ತಾರೆ ಅದನ್ನು ಎಲ್ಲಾ ಬರೆದುಕೊಡು ಅವರ ಗಮನಕ್ಕೆ ತರುತ್ತೇನೆ. ಇನ್ನು ಅಧಿಕಾರಿಗಳು ಇಲ್ಲಿ ಇರಬೇಕು ಎಂದು ನಾವು ಆಜ್ಞೆ ಕೊಟ್ಟಿದ್ದೇವೆ. ಕೆಲವರು ಸಕಾಲಕ್ಕೆ ಬಂದಿಲ್ಲ ಅಂಥವರಿಗೆ ಎಚ್ಚರಿಕೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ತಮ್ಮ ಮೂಲಕ ಸಭೆಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರು ನನ್ನ ಕ್ಷೇತ್ರದಲ್ಲಿ ಬಸ್ ಇಲ್ಲದೆ ವಿದ್ಯಾರ್ಥಿಗಳ ಜೀವನ ಹಾಳಾಗುತ್ತಾ ಇದೆ. ಪರೀಕ್ಷೆಗೆ ಹೋಗಿ ಅಟೆಂಡ್ ಮಾಡುವುದಕ್ಕೆ ಆಗುತ್ತಾ ಇಲ್ಲ.

ಅಧ್ಯಕ್ಷರು : ನೀವು ಇದನ್ನು ಪಂಚಾಯಿತಿ ಮಾಡಬೇಡಿ, ಇದು ಅಸೆಂಬ್ಲಿ. ನಿನ್ನೆ ಎಲ್ಲಾ ಅಷ್ಟು ಸವಿಸ್ತಾರವಾಗಿ ಚರ್ಚೆ ಮಾಡಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ : ಅವರು ಹೇಳಿದ್ದರು ಸಹ ಏನೂ ಪರಿಣಾಮವಾಗಲಿಲ್ಲ.

1995-96ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಆಯವ್ಯಯ ಚರ್ಚೆ ಈ ವರ್ಷದಲ್ಲಿ ಪ್ರಮುಖವಾದಂತಹ ಚರ್ಚೆ, ಈ ಸಭೆಯ ಕಾರ್ಯಕಲಾಪ ಬಹಳ ಸುದೀರ್ಘವಾಗಿ ಇರಬೇಕು ಎನ್ನತಕ್ಕದ್ದು ಎಲ್ಲರ ಅಭಿಲಾಷೆ ಮತ್ತು ಅನಿಸಿಕೆ. 'ಮತ್ತು ಕರ್ತವ್ಯ. ಈ ಸಂದರ್ಭದಲ್ಲಿ ಆಯವ್ಯಯ ಚರ್ಚೆ ಕೇವಲ ಎರಡು ದಿವಸಗಳಿಗೆ ಮಾತ್ರ ಸೀಮಿತವಾಗಿದೆ. ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಆರೋಗ್ಯಕರವಾದ ಲಕ್ಷಣವಲ್ಲ. ನೀವು ಏನೇ ಕಥೆಯನ್ನು ಹೇಳಬಹುದು. ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಚುನಾವಣೆಯಿತ್ತು. ಆದುದುರಿಂದ ಈ ಸದನವನ್ನು ಕರೆಯುವುದು ತಡವಾಯಿತು. ಅದಕ್ಕಾಗಿ ಆಯವ್ಯಯವನ್ನು ಬಹಳ ಆತುರಾತುರವಾಗಿ ಚರ್ಚಿಸುತ್ತಿದ್ದೇವೆ ಎಂದು, ಕಡಿಮೆ ದಿವಸಗಳನ್ನು ಕರೆದಿದ್ದೇವೆ, ಎನ್ನುವ ವಾದವಿದೆಯಲ್ಲ, ಅದು ಒಂದು ವಾದಕ್ಕೆ ವಸ್ತುವಾಗಬಹುದು. ಅಷ್ಟೇ ಹೊರತು ಪ್ರಾಮಾಣಿಕತೆಗೆ ಬಹಳ ದೂರ. ಸಾಮಾನ್ಯವಾಗಿ ಈ